# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಸ್ಪೆಷಲ್ ಎಸ್.ವಿ.ಸಿ. 2/2021

ಅಸಾ : 1

ಚಾಸಾ : 1

ಸಾಕ್ಷಿದಾರರ ಹೆಸರು : ಕಲವೀರಗೌಡ ಪಾಟೀಲ

ತಂದೆಯ ಹೆಸರು : ಕರಬಸಗೌಡ

ವಯಸ್ಸು : 54 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಹಂದಿಗನೂರು.

ದಿನಾಂಕ: **27/06/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ: –**

1. ಇಂದು ಹಾಜರಿರುವ 1 ನೇ ಆರೋಪಿ ಹಾವೇರಿ ತಹಶೀಲ್ದಾರ ಕಾರ್ಯಾಲಯದ ದಾಖಲಾತಿ ವಿಭಾಗದ ನೌಕರನಿರುತ್ತಾನೆ. 2019 ರಂದು ನಾನು ಒಂದು ಜಮೀನನ್ನು ಮಾರಾಟ ಮಾಡಿದ್ದೆ. ಸದರಿ ಜಮೀನು ಹಂದಿಗನೂರು ಗ್ರಾಮದ ಸರ್ವೆ ನಂ.28/1 ಅ 2 ಎಕರೆ 16 ಗುಂಟೆ ಇರುತ್ತದೆ. ಬೈರಾಪುರದ ದಾನಪ್ಪ ಲಮಾಣಿ ಎನ್ನುವವರಿಗೆ ಮಾರಾಟ ಮಾಡಿದ್ದೆ. ಎನ್.ಓ.ಸಿ. ಬೇಕಾಗಿತ್ತು. ತಹಶೀಲ್ದಾರ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೆ.

2. 2 ನೇ ಆರೋಪಿ ಗೌರಮ್ಮರವರನ್ನು ವಿಚಾರಿಸಿದೆ. ಅವರು ರೆಕಾರ್ಡ ರೂಮಿನಿಂದ ದಾಖಲೆ ತರುವಂತೆ ತಿಳಿಸಿದರು. ಆದುದರಿಂದ ಇಂದು ಹಾಜರಿರುವ 1 ನೇ ಆರೋಪಿ ಕಡೆಗೆ ಹೋದೆ. 1 ನೇ ಆರೋಪಿ ದಾಖಲೆಗಳನ್ನು ತಯಾರಿಸಿಕೊಟ್ಟ.

3. ಪುನ: 2 ನೇ ಆರೋಪಿ ಬಳಿ ಹೋದೆ. ಅವರು ದಾಖಲೆಗಳನ್ನು ಪಡೆದು ಒಂದು ವರ್ಷ ಓಡಾಡಿಸಿದರು. ದಿನಾಂಕ:04/03/2020 ರಂದು ತಹಶೀಲ್ದಾರರನ್ನು ಕಾಣಲು ತಹಶೀಲ್ದಾರ ಕಾರ್ಯಾಲಯಕ್ಕೆ ಹೋದೆ. ನನ್ನನ್ನು ಹೊರಗೆ ಹಾಕಿದರು. ಗೌರಮ್ಮ ಎನ್ನುವವರು ಒಳಗೆ ಹೋದರು. ಪುನ: ಗೌರಮ್ಮ ಹೊರಗೆ ಬಂದರು. ತಹಶೀಲ್ದಾರರು ನನ್ನನ್ನು ಕರೆದು ಇನ್ನು ಕೆಲವು ದಾಖಲೆಗಳನ್ನು ತರುವಂತೆ ತಿಳಿಸಿದರು. ಪುನ: 1 ನೇ ಆರೋಪಿ ಬಳಿ ಹೋದೆ. ಅವರು ಅವಶ್ಯಕ ದಾಖಲೆಗಳನ್ನು ಕೊಟ್ಟರು. ಕೇಳಲಾದ ಎಲ್ಲಾ ದಾಖಲೆ ಕೊಟ್ಟಿರುವುದರಿಂದ ದಾಖಲೆ ತಯಾರಿಸಿಕೊಡುವಂತೆ 1 ನೇ

ಆರೋಪಿ ಬಂದು 2 ನೇ ಆರೋಪಿಗೆ ತಿಳಿಸಿದರು. ಮರುದಿನ ಬರುವಂತೆ 2 ನೇ ಆರೋಪಿ ನನಗೆ ತಿಳಿಸಿದರು. ಮರುದಿನ ಬೆಳಿಗ್ಗೆ ಹೋದೆ. 2 ನೇ ಆರೋಪಿ ಕೋಪಗೊಂಡು ನನ್ನ ಮೇಲೆ ಕೇಸು ಮಾಡುವುದಾಗಿ ಹೇಳಿದರು.

4. ಚಾಸಾ-7 ಶಿರಸ್ತೇದಾರರನ್ನು ಕಂಡೆ. ಪೊಲೀಸರನ್ನು ಕರೆಸುವುದಾಗಿ 2 ನೇ ಆರೋಪಿ ತಿಳಿಸಿದರು. ಕೆಲಸ ಮಾಡಿಕೊಡುವಂತೆ 1 ನೇ ಆರೋಪಿ ಪುನಃ 2 ನೇ ಆರೋಪಿಗೆ ತಿಳಿಸಿದರು. ಆದಾಗ್ಯೂ 1 ವರ್ಷ ಕೆಲಸ ಮಾಡಿಕೊಡಲಿಲ್ಲ. ಪುನಃ ಮರುದಿನ ಬರುವಂತೆ ತಿಳಿಸಿದರು. 2 ನೇ ಆರೋಪಿ ಮತ್ತು ಚಾಸಾ-7 ದುಡ್ಡು ಕೊಡುವಂತೆ ತಿಳಿಸಿದರು. ಏನಾದರೂ ಕೊಟ್ಟು ಕೆಲಸ ಮಾಡಿಸಿಕೊಳ್ಳುವಂತೆ 1 ನೇ ಆರೋಪಿ ನನಗೆ ತಿಳಿಸಿದ. ನಾನು ಪೊಲೀಸರ ಹತ್ತಿರ ಹೋಗಿ ದೂರು ಕೊಟ್ಟೆ. ದೂರನ್ನು ಚಾಸಾ-4 ನನ್ನ ಮಗ ಬರೆದ. ಈಗ ತೋರಿಸಿದ ದೂರಿನ ಮೇಲೆ ನನ್ನ ಸಹಿ ಇದ್ದು ನಾನು ಕೊಟ್ಟಿದ್ದೇ ಇರುತ್ತದೆ. ದೂರನ್ನು ನಿಪಿ-1, ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

5. ಪೊಲೀಸರು ಚಾಸಾ-2 ಮತ್ತು 3 ಪಂಚರನ್ನು ಕರೆಸಿ ನನ್ನ ದೂರು ಪಡೆದರು. ರೂ.2000/- ರ 1 ಹಾಗೂ ರೂ.500/-ರ 4 ನೋಟುಗಳನ್ನು ಸಾಕ್ಷಿ ಪುನಃ ಹೇಳುತ್ತಾರೆ ರೂ.500/- ರ 6 ನೋಟುಗಳನ್ನು ಪೊಲೀಸರಿಗೆ ಕೊಟ್ಟೆ. ಪಂಚನಾಮೆ ಮಾಡಲಾಯಿತು. ಈಗ ತೋರಿಸಿದ ವಹಿಸುವಿಕೆ ಪಂಚನಾಮೆಯನ್ನು ನಿಪಿ-2, ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

6. ನಾನು ಕೊಟ್ಟ ನೋಟುಗಳಿಗೆ ಪುಡಿ ಹಚ್ಚಿ, ನೋಟುಗಳ ಸಂಖ್ಯೆಗಳನ್ನು ಬರೆದುಕೊಂಡರು. ನೋಟುಗಳಿಗೆ ಪುಡಿ ಹಚ್ಚಿದ ನಂತರ ಪುಡಿ ಹಚ್ಚಿದ ವ್ಯಕ್ತಿಯ ಕೈತೊಳೆದು ದ್ರಾವಣ ತಯಾರಿಸಿದರು. ಈಗ ತೋರಿಸಿದ ದ್ರಾವಣ ಅದೇ (ಕೈತೊಳೆದ ದ್ರಾವಣ) ಇದ್ದು, ಅದನ್ನು ಮುಮಾ-1 ಎಂದು ಗುರುತಿಸಲಾಯಿತು. ಸ್ಯಾಂಪಲ್ ದ್ರಾವಣವನ್ನು ಮುಮಾ-2 ಎಂದು ಗುರುತಿಸಲಾಯಿತು. ಪಂಚರ ಸಹಿ ಪಡೆದರು. ಅಲ್ಲಿಂದ ತಹಶೀಲ್ದಾರ ಕಾರ್ಯಾಲಯಕ್ಕೆ ಹೋದೆವು. 1 ನೇ ಆರೋಪಿಯನ್ನು ಕಂಡೆ. 1 ನೇ ಆರೋಪಿಯ ಹೆಸರು ಶಹಾಪುರ ಇರುತ್ತದೆ. 1 ನೇ ಆರೋಪಿ ನಮ್ಮನ್ನು ಹೊಟೇಲಿಗೆ ಕರೆದುಕೊಂಡು ಹೋಗಿ ಈ ದಿನ ಸಂಶಯ ಬರುತ್ತಿದೆ ಬೇಡ ಎಂದು ಹೇಳಿದರು. ಪುನಃ ಕಾರ್ಯಾಲಯಕ್ಕೆ ಹೋದೆವು. ಒಂದು ಪಂಚನಾಮೆ ಮಾಡಲಾಯಿತು. ಟ್ರ್ಯಾಪ್ ಮುಂದೂಡಲ್ಪಟ್ಟ ಪಂಚನಾಮೆಯನ್ನು ನಿಪಿ-3, ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

7. ದುಡ್ಡನ್ನು ಪೊಲೀಸರಿಗೆ ವಾಪಾಸು ಕೊಟ್ಟೆ. ಮರುದಿನ ಪೊಲೀಸ ಠಾಣೆಗೆ ಹೋದೆ. ಪೊಲೀಸರು ಚಾಸಾ-3 ಪಂಚರನ್ನು ನನ್ನೊಂದಿಗೆ ಕಳಿಸಿದರು. ಪುನಃ ಪಂಚನಾಮೆ ತಯಾರಿಸಿದರು. 2 ನೇ ವಹಿಸುವಿಕೆ ಪಂಚನಾಮೆಯನ್ನು ನಿಪಿ-4, ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ರೂಪಾಯಿ ಕೊಟ್ಟ ನಂತರ ಟವೆಲ್ಲಿನಿಂದ ಮುಖ ಒರೆಸಿಕೊಳ್ಳುವಂತೆ ಪೊಲೀಸರು ನನಗೆ ತಿಳಿಸಿದರು. 1 ನೇ ಆರೋಪಿಯನ್ನು ಕಾಣಲು ತಹಶೀಲ್ದಾರ ಕಾರ್ಯಾಲಯದ ದಾಖಲೆ

ವಿಭಾಗಕ್ಕೆ ಹೋದೆ. 1 ನೇ ಆರೋಪಿ ಅಲ್ಲಿರಲಿಲ್ಲ. ದಾಖಲೆ ವಿಭಾಗದ ಮತ್ತೊಂದು ಭಾಗದಲ್ಲಿ ಇದ್ದರು. ಮರಿಯಪ್ಪ ಎನ್ನುವವರನ್ನು ತಾನು ಕಳಿಸುವುದಾಗಿ ಅವರಿಗೆ ದುಡ್ಡು ಕೊಡುವಂತೆ 1 ನೇ ಆರೋಪಿ ತಿಳಿಸಿದ.

8. ನಾನು ಚಾಸಾ-6 ಮರಿಯಪ್ಪ ಎನ್ನುವವರಿಗೆ ನನ್ನ ಜೇಬಿನಲ್ಲಿದ್ದ ರೂ.5,000/- ತೆಗೆದುಕೊಟ್ಟೆ. ಚಾಸಾ-5 ಅಲ್ಲಿಗೆ ಬಂದರು. ಚಾಸಾ-5 ಚಾಸಾ-6 ರಿಂದ ರೂ.2,000/- ವಾಪಾಸು ಪಡೆದು ನನ್ನ ಜೇಬಿಗೆ ಹಾಕಿದರು. ಚಾಸಾ-6 ಹೊಟೇಲ್ ಕಡೆಗೆ ಹೋದ. ಪೊಲೀಸರು ಬಂದು ಚಾಸಾ-6 ರನ್ನು ಹಿಡಿದು ತಂದು ತಹಶೀಲ್ದಾರ ಕಾರ್ಯಾಲಯದ ಪಕ್ಕದಲ್ಲಿ ರಾತ್ರಿ 10.30 ರವರೆಗೆ ಪಂಚನಾಮೆ ಮಾಡಿದರು.

9. ಆಗ ಪೊಲೀಸರು ನನ್ನ, ಚಾಸಾ-5 ಮತ್ತು 1 ನೇ ಆರೋಪಿಯ ಧ್ವನಿ ಆಲಿಸಿದರು. 1 ನೇ ಆರೋಪಿ ಹೇಳಿದಂತೆ ನಡೆದುಕೊಂಡಿದ್ದಾಗ ಚಾಸಾ-6 ಬರೆದುಕೊಟ್ಟರು. ಚಾಸಾ-6 ರ ಕೈತೊಳೆದು ಗುಲಾಬಿ ಬಣ್ಣದ ದ್ರಾವಣ ಸಂಗ್ರಹಿಸಿದರು. ಈಗ ತೋರಿಸಿದ ಬಾಟಲನಲ್ಲಿ ಚಾಸಾ-6 ರ ಎರಡೂ ಕೈತೊಳೆದ ದ್ರಾವಣ ಇದ್ದು, ಎಡಗೈ ತೊಳೆದ ಗುಲಾಬಿ ದ್ರಾವಣವನ್ನು ಮುಮಾ-3, ಬಲಗೈ ತೊಳೆದ ಹಾಗೂ ಸ್ಯಾಂಪಲ್ ದ್ರಾವಣವನ್ನು ಮುಮಾ-4 ಮತ್ತು 5 ಎಂದು ಗುರುತಿಸಲಾಯಿತು.

10. 1 ನೇ ಆರೋಪಿಯ ಕೈತೊಳೆದು ದ್ರಾವಣ ಸಂಗ್ರಹಿಸಲಾಯಿತು. ದ್ರಾವಣದ ಬಣ್ಣ ಬದಲಾಗಲಿಲ್ಲ. ಈಗ ತೋರಿಸಿದ ಎರಡು ಬಾಟಲಗಳಲ್ಲಿ ಇರುವ ದ್ರಾವಣ 1 ನೇ ಆರೋಪಿ ಕೈ ತೊಳೆದ ನಂತರ ಸಂಗ್ರಹಿಸಿದ್ದು ಇದ್ದು ಅವುಗಳನ್ನು ಕ್ರಮವಾಗಿ ಮುಮಾ-6 ಮತ್ತು 7 ಎಂದು ಗುರುತಿಸಲಾಯಿತು.

11. ಚಾಸಾ-5 ರ ಕೈತೊಳೆದು ದ್ರಾವಣ ಸಂಗ್ರಹಿಸಲಾಯಿತು. ಬಣ್ಣ ಬದಲಾಗಲಿಲ್ಲ. ಸಾಕ್ಷಿ ಪುನಃ ಹೇಳುತ್ತಾರೆ ಒಂದು ಕೈತೊಳೆದ ದ್ರಾವಣದ ಬಣ್ಣ ಬದಲಾಯಿತು. ಚಾಸಾ-5 ರ ಕೈತೊಳೆದ ನತಂರ ಸಂಗ್ರಹಿಸಿದ ಬಣ್ಣ ಬದಲಾದ ಮತ್ತು ಬದಲಾಗದೇ ಇರುವ ದ್ರಾವಣಗಳನ್ನು ಈಗ ಮುಮಾ-8 ಮತ್ತು 9 ಎಂದು ಗುರುತಿಸಲಾಯಿತು.

12. ಅಲ್ಲಿಯೇ ಹಾಜರಿದ್ದ 2 ನೇ ಆರೋಪಿ ತಹಶೀಲ್ದಾರ ಕಾರ್ಯಾಲಯಕ್ಕೆ ಹೋಗುವುದಾಗಿ ಹೇಳಿ, ಆಸ್ಪತ್ರೆಗೆ ಹೋಗಿ ದಾಖಲಾದಳು. ತಹಶೀಲ್ದಾರ ಇದ್ದರು. ಪೊಲೀಸರು ಎಲ್ಲವನ್ನು ರೆಕಾರ್ಡ ಮಾಡಿಕೊಂಡು ಪಂಚನಾಮೆ ತಯಾರಿಸಿ ನನ್ನ ಸಹಿ ಪಡೆದರು. ಟ್ರ್ಯಾಪ್ ಪಂಚನಾಮೆಯನ್ನು ನಿಪಿ-5, ನನ್ನ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಚಾಸಾ-8 ತಕ್ಷಣ ದಾಖಲೆ ಕೊಡಿಸಿದರು. ಈ ಮೇಲೆ ಹೇಳಿದ ಲಂಚದ ಹಣ ಪೊಲೀಸರು ಜಪ್ತಿಮಾಡಿದರು. ಅದನ್ನು ಗುರುತಿಸಬಲ್ಲೆ.

13. (ಸೀಲ್ಡ ಕವರಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಸ್ವತ್ತನ್ನು ಸಾಕ್ಷಿಗೆ ತೋರಿಸಲಾಯಿತು.) ಈಗ ತೋರಿಸಲಾದ 3,000/- (ರೂ.2,000/-ದ ಒಂದು ನೋಟಿನ

ಪೋಟೋ ಹಾಗೂ ರೂ.500/-ರ 2 ನೋಟುಗಳು) ಹಾಗೂ ರೂ.2,000/- (ರೂ.2,000/-ದ ಒಂದು ನೋಟಿನ ಪೋಟೋ) ಆ ದಿನ ಪೊಲೀಸರು ಜಪ್ತಿಮಾಡಿದ ನೋಟುಗಳು ಅಥವಾ ಅವುಗಳ ಪೋಟೋ ಇರುತ್ತವೆ. ರೂ.3,000/- ಕುರಿತ ಪೋಟೋ ಮತ್ತು ನೋಟನ್ನು ಮುಮಾ-10 ಹಾಗೂ ರೂ.2,000/- ಕುರಿತ ನೋಟಿನ ಪೋಟೋಗಳನ್ನು ಮುಮಾ-11 ಎಂದು ಗುರುತಿಸಲಾಯಿತು. *(ಮುಮಾ-10 ಮತ್ತು 11ರ ನೋಟುಗಳ ನಂಬರುಗಳು ಪೊಲೀಸರು ತಯಾರಿಸಿದ ನೋಟುಗಳ ನಂಬರನ ವಿವರಗಳಿಗೆ ಹೋಲಿಸಿ ನೋಡಲಾಯಿತು. ಅವುಗಳಲ್ಲಿ ಪರಸ್ಪರ ಹೊಂದಾಣಿಕೆ ಇರುತ್ತದೆ. ಸದರಿ ದಾಖಲೆಯನ್ನು ನಿಪಿ-6 ಎಂದು ಗುರುತಿಸಲಾಯಿತು.)*

*(ಈ ಹಂತದಲ್ಲಿ ಸಿಡಿ ಆಲಿಸಲು ಲ್ಯಾಪಟ್ಯಾಪ್‌ನ ಅವಶ್ಯಕತೆ ಇದೆ ಎಂದು ಮಾನ್ಯ ವಿ.ಸಾ.ಅ. ರವರು ಸಮಯ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)*

***(*ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.*)***

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.